ಬುದ್ಧನನ್ನು ಜೀವ ವಿರೋಧಿ, ಅಭಿವೃದ್ಧಿ ವಿರೋಧಿ ಅಂತ ಯಾರಾದರೂ ಅಭಿಪ್ರಾಯಪಟ್ಟರೆ ನಾನು ಅಚ್ಚರಿಪಡುವುದಿಲ್ಲ!

ಅದೆಲ್ಲ ಹಾಗಿರಲಿ, ಸತ್ತ ಅಪ್ಪ ಅಮ್ಮಂದಿರಿಗೆ ಶ್ರಾದ್ಧ ಮಾಡ್ತಾನಲ್ಲ ಮಗ, ಅಲ್ಲೂ 'ಅಪ್ಪ ಅಮ್ಮಂದಿರಿಗೆ ಸದ್ಗತಿ(ಸಿಗುವುದಾದರೆ) ಸಿಗಲಿ' ಎಂಬ ದೂರದ ಆಸೆಯ ಬೀಜ ಆ ಮಗನ ಮನದಾಳದಲ್ಲಿರುವುದು ನಿಮ್ಮ ಕಣ್ಣಿಗೆ ಕಾಣಿಸುತ್ತಿಲ್ಲವೇನು?

ಈ ಎಲ್ಲ ಕಾರಣಗಳಿಂದಾಗಿ, ಜೊತೆಗೆ ನಾನು ಈ ಲೇಖನದಲ್ಲಿ ಹೇಳದೆ ಬಿಟ್ಟಿರುವ ಇನ್ನೂ ಎಷ್ಟೋ ಕಾರಣಗಳಿಂದಾಗಿ 'ಆಸೆಯೇ ದುಃಖಕ್ಕೆ ಕಾರಣ' ಎಂಬ ಬುದ್ಧನ ವಚನವನ್ನು ದುರಾಸೆಯೇ ದುಃಖಕ್ಕೆ ಕಾರಣ' ಎಂಬ ಒಂದು ಸಣ್ಣ ತಿದ್ದುಪಡಿಯೊಂದಿಗೆ ಅಂಗೀಕರಿಸಬಹುದೇನೋ?

ಈಗ, 'ದುರಾಸೆಯೇ ದುಃಖಕ್ಕೆ ಕಾರಣವಾದರೆ ಆಸೆಯು ಯಾವುದಕ್ಕೆ ಕಾರಣ?' ಎಂಬ ಇನ್ನೊಂದು ಪ್ರಶ್ನೆಯು ಎದುರಾಗುತ್ತದೆ. ಈ ಪ್ರಶ್ನೆಗೆ, 'ಆಸೆಯೇ ಅಭಿವೃದ್ಧಿಗೆ ಕಾರಣ, ಆಸೆಯೇ ಸಂತೋಷಕ್ಕೆ ಕಾರಣ' ಎಂಬ ಉತ್ತರ ಸಮಂಜಸ ಅಂತ ನನ್ನ ಅನಿಸಿಕೆ.

ಕೊನೆಯದಾಗಿ ಹೇಳಲೇಬೇಕಾದ ಒಂದು ಮಾತು ಉಳಿದಿದೆ. ನೋಡಿ ಈ ಲೇಖನ ಪ್ರಕಟವಾಗಿ ಒಂದಿಷ್ಟು ಹಣ, ಹೆಸರು ಬರಬಹುದೇನೋ ಎಂಬ ನನ್ನೊಳಗಿನ ದೂರದ ಆಸೆಯೇ ಇದರ ರಚನೆಗೆ ಪ್ರೇರಕ. ನನ್ನಲ್ಲಿ ಆಸೆಯೇ ಇರದಿದ್ದರೆ ನಿಮ್ಮ ಮುಂದೆ ಈ ಲೇಖನ ಇರುತ್ತಿತ್ತೇನು?

ಆದರೆ, 'ಅತಿ ಆಸೆ ಗತಿ ಗೇಡು' ಅಂತೊಂದು ಗಾದೆ ಕನ್ನಡದಲ್ಲಿ ಇದೆಯಲ್ಲಾ ಅಂತ ನೀವು ಕೇಳಬಹುದು. ಬುದ್ಧನಿಂದ ಪ್ರಭಾವಿತನಾದ ಯಾವನೋ ಒಬ್ಬ ಈ ಗಾದೆಯನ್ನು ರಚಿಸಿ ಗಾಳಿಯಲ್ಲಿ ತೇಲಿಬಿಟ್ಟಿರಬೇಕು. ಆದರೆ ಆತ 'ಅತಿ ಆಸೆ ಗತಿ ಗೇಡು' ಅಂದಿದ್ದಾನೆಯೇ ವಿನಃ 'ಆಸೆ ಗತಿ ಗೇಡು' ಅಂದಿಲ್ಲವಲ್ಲ!

**ಜಿ.ವಿ. ಗಣೇಶಯ್ಯ**

ಶೃಂಗೇರಿಯ ಕೊಪ್ಪ ತಾಲ್ಲೂಕಿನ ಸಮೀಪದ ಹಳ್ಳಿಯೊಂದರಲ್ಲಿ ಜನಿಸಿದ ಗಣೇಶಯ್ಯ ಪ್ರಸ್ತುತ ನೆಲೆಸಿರುವುದು ಮೈಸೂರಿನಲ್ಲಿ. ಅವರು ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಕನ್ನಡದ ಅನೇಕ ದಿನಪತ್ರಿಕೆ ಹಾಗೂ ವಾರಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆ. ಸುಮಾರು 22 ಪುಸ್ತಕಗಳ ಲೇಖಕ ಗಣೇಶಯ್ಯ.